# ಎಲ್ಲೆಲ್ಲು ಸಂಗೀತವೇ...

ಸಂಗೀತ ನಾದದಲ್ಲಿ ವಿಶ್ವವನ್ನೇ ಬೆಸೆಯುವ ಶಕ್ತಿಯಿದೆ. ಮಧುರಾತಿಮಧುರ ಅನುಭೂತಿ ಸೃಷ್ಟಿಸುವ ಸಂಗೀತಕ್ಕೆ ಕೇಳುಗರ ಮನಮುಟ್ಟುವ, ಹೃದಯ ತಟ್ಟುವ ಗುಣವಿದೆ. ನಮ್ಮ ಪ್ರಕೃತಿಯಲ್ಲೇ ಸಂಗೀತವಿದೆ. ಹರಿಯುವ ನದಿಯಲ್ಲಿ, ಬೀಸುವ ಗಾಳಿಯಲ್ಲಿ, ಹಕ್ಕಿಗಳ ಉಲಿಯಲ್ಲಿ, ದುಂಬಿಗಳ ಝೇಂಕಾರದಲ್ಲಿ, ಗಾಯಕರ ದನಿಯಲ್ಲಿ, ವಾದಕರ ವಾದ್ಯಗಳಲ್ಲಿ ಸಂಗೀತವಿದೆ.

**ಜೂನ್ 21 ವಿಶ್ವ ಸಂಗೀತ ದಿನ**



■ **ಉಮಾ ವೇಣೂರು**

ಎಲ್ಲೆಲ್ಲು ಸಂಗೀತವೇ, ಎಲ್ಲೆಲ್ಲು ಸೌಂದರ್ಯವೇ
ಕೇಳುವ ಕಿವಿಯಿರಲು, ನೋಡುವ ಕಣ್ಣಿರಲು....

'ಮಲಯ ಮಾರುತ' ಚಿತ್ರದ ಈ ಸುಮಧುರ ಹಾಡು ಕೆ.ಜೆ. ಏಸುದಾಸ್ ದನಿಯಲ್ಲಿ ಮೊಳಗುವುದನ್ನು ಕೇಳಲು ಎಂದಿಗೂ ಶ್ರವಣಾನಂದಕರವೇ. ಈ ಹಾಡಿನಲ್ಲಿ ಪ್ರಕೃತಿ ಮತ್ತು ಸಂಗೀತದ ನಡುವಿನ ಅನನ್ಯ ನಂಟಿನ ಅನಾವರಣವಿದೆ.

ಸಂಗೀತ ಎಲ್ಲಿ ಇಲ್ಲ ಹೇಳಿ? ಬೀಸುವ ಗಾಳಿಯಲ್ಲಿ, ಹರಿಯುವ ನೀರಿನಲ್ಲಿ, ಭ್ರಮರದ ಝೇಂಕಾರದಲ್ಲಿ, ಕೋಗಿಲೆಯ ಕಂಠದಲ್ಲಿ, ಬಾನಾಡಿಗಳ ಚಿಲಿಪಿಲಿಯಲ್ಲಿ, ಅಷ್ಟೇ ಏಕೆ, ಗಿಡಮರಗಳ ಎಲೆಗಳು ಗಾಳಿಗೆ ಅಲ್ಲಾಡಿದರೆ ಅದೂ ಸಂಗೀತವೇ, ಮುನಿಗಳು ಓಂಕಾರ ಪಠಿಸಿದರೂ ಸಂಗೀತವೇ, ಗಾಯಕ ಹಾಡಿದರೆ ಅದು ಶ್ರೇಷ್ಠ ಸಂಗೀತ, ವಾದ್ಯಗಳಲ್ಲಿ... ಅದು ಸುಷಿರ ವಾದ್ಯವೇ ಇರಲಿ, ಅವನದ್ಧ ವಾದ್ಯವೇ ಇರಲಿ ಶ್ರುತಿ–ಲಯಬದ್ಧವಾಗಿ ನುಡಿಸಿದರೆಂದರೆ ಅದು ಪರಮಾನಂದಕರ ಸಂಗೀತ. ಒಟ್ಟಿನಲ್ಲಿ ಕೇಳಲು ಆಪ್ಯಾಯಮಾನವಾದ, ಒಂದು ಕ್ಷಣ ನಮ್ಮ ಜಂಜಡವೆಲ್ಲ ಮರೆತು ಏಕಾಗ್ರತೆ ಮೂಡಿತೆಂದರೆ ಅದು ಸಂಗೀತದಿಂದ ಮಾತ್ರ ಸಾಧ್ಯ.

ಅಂದ ಹಾಗೆ ಜೂನ್ 21 ವಿಶ್ವ ಸಂಗೀತ ದಿನ. ಇದು ಸಂಗೀತ ಪ್ರಿಯರಿಗೊಂದು ಹಬ್ಬ. ವರ್ಷದ ಎಲ್ಲ ದಿನಗಳಲ್ಲೂ ಸಂಗೀತ ಕೇಳುತ್ತೇವೆ. ಆದರೂ 'ಸಂಗೀತ ದಿನ' ಜಾಗತಿಕ ಮಟ್ಟದಲ್ಲಿ ಬಹಳ ಮಹತ್ವದ್ದು. ಸಂಗೀತ ಎಂಬುದು ಹೃದಯ ಭಾಷೆ, ಬಾಂಧವ್ಯ ಬೆಸೆಯುವ ನಾದ ವಿಶ್ವಭಾಷೆಯೂ ಹೌದು. ಸಂಗೀತ ಎಂಬುದು ಭಾಷಾತೀತ, ಸಾಹಿತ್ಯಾತೀತ, ಪರಿಶುದ್ಧ ಹಾಗೂ ಎಲ್ಲ ಭಾವಗಳಿಗೆ ಮೂಲವೇ ಸಂಗೀತ.

ಭಾರತೀಯ ಸಂಗೀತದಲ್ಲಿ ಅದೆಷ್ಟು ವೈವಿಧ್ಯ...! ಒಂದು ರೀತಿಯಲ್ಲಿ ಭಾರತ ಸಂಗೀತದ ತವರೂರು ಎನ್ನಬಹುದು. ಹಿಂದೂಸ್ತಾನಿ ಸಂಗೀತ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸಿನಿಮಾ ಸಂಗೀತ, ಜಾನಪದ, ವಚನ, ಸುಗಮ ಸಂಗೀತ, ಭಕ್ತಿಗೀತೆ, ಗಜಲ್, ಫ್ಯೂಷನ್, ಪಾಪ್, ರಾಕ್, ಜಾಸ್... ಹೀಗೆ ಪಟ್ಟಿ ಮುಂದುವರಿಯುತ್ತದೆ. ಪ್ರಕೃತಿಯೇ ಸಂಗೀತ; ಜಗತ್ತೇ ನಾದಮಯ!